**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**S.C. No.** 167/2021

**ಸಾಕ್ಷಿಯನ್ನು ದಿನಾಂಕ** 19.2.2026 **ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸುಜತಾ ಕೆ ಎಂ | ಪಿ.ಡಬ್ಲ್ಯೂ–15 |
| ತಂದೆಯ/ಗಂಡನ ಹೆಸರು | : | ಹೆಚ್.ಮುದ್ದಯ್ಯ | ಸಿ.ಡಬ್ಲ್ಯೂ–9 |
| ವಯಸ್ಸು | : | 53 | |
| ಉದ್ಯೋಗ | : | ಡೆಪ್ಯೂಟಿ ಡೈರೆಕ್ಟರ್, ಆರ್.ಎಫ್.ಎಸ್.ಎಲ್, ಮಂಗಳೂರು | |
| ವಾಸ ಸ್ಥಳ | : | ಮಂಗಳೂರು | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ನಾನು 2020 ರಲ್ಲಿ ಆರ್.ಎಫ್.ಎಸ್.ಎಲ್, ಮೈಸೂರು ಇಲ್ಲಿ ಸಹಾಯಕ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿರುತ್ತೇನೆ. ದಿನಾಂಕ 18.8.2020 ರಂದು ಬನ್ನೂರು ಪೊಲೀಸ್ ಠಾಣೆಯ ಒಂದು ಪ್ರಕರಣದಲ್ಲಿನ ತನಿಖೆ ಕಾಲಕ್ಕೆ ಸ್ಥಳ ಮಹಜರ್ ಕಾಲಕ್ಕೆ ಸ್ಥಳಕ್ಕೆ ಭೇಟಿ ನೀಡುವಂತೆ ಬನ್ನೂರು ಪೊಲೀಸ್ ಠಾಣೆಯ ಪೋಲಿಸರು ತಿಳಿಸಿದ್ದರಿಂದ ಉಪನಿರ್ದೇಶಕರ ಆದೇಶದಂತೆ ನಾನು ಸ್ಥಳಕ್ಕೆ ಹೋಗಿದ್ದೆ. ಆ ಕಾಲಕ್ಕೆ ನುಗ್ಗಹಳ್ಳಿ ಗ್ರಾಮದಲ್ಲಿರುವ ಖಾಲಿ ಜಾಗದಲ್ಲಿ ಒಂದು ಮಹಿಳೆಯ ಶವ ಇತ್ತು. ಆ ಕಾಲಕ್ಕೆ ಸ್ಥಳದಲ್ಲಿರುವ ವೈಜ್ಞಾನಿಕ ಸಾಕ್ಷ್ಯವನ್ನು ಸಂಗ್ರಹಿಸಿಕೊಡುವಂತೆ

ತನಿಖಾಧಿಕಾರಿ ನನಗೆ ತಿಳಿಸಿದರು. ಶವ ಬಿದ್ದಿದ್ದ ಸ್ಥಳದಲ್ಲಿ ಶವದ ಕೆಳಗೆ ಒಂದು ಟವೆಲ್ ಇತ್ತು. ಆ ಟವಲನ್ನು ಮತ್ತು ಸ್ಥಳದಲ್ಲಿದ್ದ ರಕ್ತ ಹತ್ತಿದ ಮಣ್ಣು ಮತ್ತು ರಕ್ತ ಹತ್ತದ ಮಾದರಿ ಮಣ್ಣನ್ನು ಸಂಗ್ರಹಿಸಿ ತನಿಖಾಧಿಕಾರಿಗೆ ನೀಡಿದ್ದೆ. ಆ ಸ್ಥಳದ ಸ್ವಲ್ಪ ದೂರದಲ್ಲಿ ಸಹ ರಕ್ತ ಹತ್ತಿದ ಮಣ್ಣು ಮತ್ತು ರಕ್ತ ಹತ್ತದ ಮಾದರಿ ಮಣ್ಣನ್ನು ಸಂಗ್ರಹಿಸಿ ತನಿಖಾಧಿಕಾರಿಗೆ ನೀಡಿದ್ದೆ. ಶವದಿಂದ ಸ್ವಲ್ಪ ದೂರದಲ್ಲಿ ಕೆಂಪು ಬಣ್ಣದ ಬಳೆ ಚೂರುಗಳು ಇದ್ದವು. ಅವುಗಳನ್ನು ಸಹ ಸಂಗ್ರಹಿಸಿ ತನಿಖಾಧಿಕಾರಿಗೆ ನೀಡಿದ್ದೆ. ಅವರು ಅವುಗಳನ್ನು ಸೀಲ್ ಮಾಡಿ ಅಮಾನತ್ತುಪಡಿಸಿಕೊಂಡರು. ಈಗ ನನಗೆ ತೋರಿಸುತ್ತಿರುವ ಎಂಓ 1 ರಿಂದ 8 ವಸ್ತುಗಳು ಆ ದಿನ ಆ ಸ್ಥಳದಲ್ಲಿ ಸಂಗ್ರಹಿಸಿದ ವಸ್ತುಗಳಿವೆ. ಈಗ ನಾನು ನೋಡುತ್ತಿರುವ ನಿಪಿ4 ಮಹಜರ್ ಆ ಕಾಲಕ್ಕೆ ಮಾಡಿದ ಮಹಜರ್ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಿಪಿ4 ಬಿ ಎಂದು ಗುರುತಿಸಿದೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ ಇಲ್ಲ**

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ವಿ.ಸಿ ಮೂಲಕ ಹಾಜರಾಗಿ ನುಡಿದ ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು
ಮೈಸೂರು